ವರ್ಷ ಸಣ್ಣವಳಾಗಿದ್ದು ಯೌವ್ವನವತಿಯಾಗಿದ್ದಳು. ಅವಿವಾಹಿತನಾಗಿದ್ದು ಹಲವು ಹೆಂಗಸರ ಸಹವಾಸ ಮಾಡಿಕೊಂಡಿದ್ದ ಸಿದ್ಧಣ್ಣ ತನಗಿಂತ ದೊಡ್ಡವಳಾದರೂ ಗುಬ್ಬಕ್ಕೆಯ ಮೇಲೂ ಕಣ್ಣುಹಾಕಿ, ನಯವಂಚನೆಯಿಂದ ಅವಳನ್ನು ಒಲಿಸಿಕೊಳ್ಳುತ್ತಾನೆ. ಕೊನೆಗೆ ಅವಳನ್ನು ದಾಸಿಯಂತೆ ನಡೆಸಿಕೊಳ್ಳುತ್ತಾನೆ. ಅವನ ಮಾತಿಗೆ ಮರುಳಾಗಿ ಗಂಡನಿರುವಾಗಲೇ ಅವನ ಬಲೆಗೆ ಬಿದ್ದಿದ್ದ ಗುಬ್ಬಕ್ಕೆ ಗಂಡನ ಮರಣಾನಂತರ ಅವನ ದಾರಿ ಕಾಯುವ ವೇಶ್ಯೆಯಂತಾಗುತ್ತಾಳೆ. ಗುಬ್ಬಕ್ಕೆಯ ಪಾತ್ರ ಕುವೆಂಪು ಅವರ ಕಾನೂರು ಸುಬ್ಬಮ್ಮ ಹೆಗ್ಗಡಿತಿಯ (1936) ಪಾತ್ರವನ್ನು ನೆನಪಿಸುವಂತಿದೆ. ಶ್ರೀಮಂತರು ಪರಸ್ತ್ರೀಯರನ್ನು 'ಇಟ್ಟುಕೊಳ್ಳುವ' ವ್ಯವಸ್ಥೆಯನ್ನು ಒಪ್ಪಿದ ಸ್ವಾತಂತ್ರ್ಯಪೂರ್ವದ ಭಾರತೀಯ ಸಮಾಜಕ್ಕೂ ಸೋದರತ್ತೆಯ ಜತೆಗಿನ ಕಾಮಸಂಬಂಧ ಅನೈತಿಕವೆನಿಸುತ್ತದೆ.

ಸಿದ್ಧಣ್ಣ ಹದಿಹರೆಯದಲ್ಲಿದ್ದಾಗಲೇ ಹೊಸಂಗಡಿಯ ಪುಂಡರ ತಂಡದ ಜತೆಗೆ ಸೇರಿಕೊಂಡು ಅದರ ನಾಯಕನೇ ಆಗುತ್ತಾನೆ. ಬಾಳಪ್ಪ ಸೆಟ್ಟಿಯವರು ತಮ್ಮ ಅಳಿಯನ ಪುಂಡಾಟಿಕೆಯನ್ನು ಹತೋಟಿಗೆ ತರಲೆಂದು ಅವನಿಗೆ ಯಜಮಾನಿಕೆಯನ್ನು ಕೊಟ್ಟುನೋಡುತ್ತಾರೆ. ಆದರೆ ಅವನು ಸುಳ್ಳು ಲೆಕ್ಕಗಳನ್ನು ಬರೆದು ಹಣಮಾಡಿಕೊಂಡು ತನ್ನ ಪುಂಡರ ಗೋಷ್ಠಿಗೂ, ಹೆಂಗಸರ ಚಾಳಿಗೂ ಬಳಸುತ್ತಿದ್ದುದು ತಿಳಿದ ನಂತರ ಕೈ ಬಿಗಿ ಮಾಡುತ್ತಾರೆ. ಇದರಿಂದ ಕುಪಿತನಾದ ಸಿದ್ಧಣ್ಣ ಹೊಸಂಗಡಿ ಪುಂಡರಿಗೆ ಹೇಳಿ ಅವರನ್ನು ಕೊಲೆ ಮಾಡಿಸುತ್ತಾನೆ. ಸಿದ್ಧಣ್ಣನ ಸೂಚನೆಯಂತೆ ಪುಂಡರು ಬಾಳಪ್ಪ ಸೆಟ್ಟಿಯವರು ಗಾಡಿಯಲ್ಲಿ ಹೋಗುವಾಗ ಇರಿದು ಕೊಂದು, ಗಾಡಿಯಾಳನ್ನು ಕತ್ತುಹಿಸುಕಿ ಕೊಲ್ಲುತ್ತಾರೆ. ನಂತರ ಸಿದ್ಧಣ್ಣನೇ ಗುತ್ತಿನ ಯಜಮಾನನಾಗುತ್ತಾನೆ; ಊರಿನ ಅಘೋಷಿತ ನಾಯಕನಾಗುತ್ತಾನೆ. ಇದು ಬ್ರಿಟಿಷರು ಭಾರತ ದೇಶದ ರಾಜರನ್ನು ಮೋಸದಿಂದ ಪದಚ್ಯುತಗೊಳಿಸಿ ತಾವೇ ಒಡೆಯರಾದುದನ್ನು ಸೂಚಿಸುವ ಸನ್ನಿವೇಶವಾಗಿದೆ.

ಬಾಳಪ್ಪ ಸೆಟ್ಟಿಯವರ ತಂಗಿ ಗಂಗಕ್ಕೆ, ಸಿದ್ಧಣ್ಣನ ನಂತರ ಹುಟ್ಟಿದ ಬಾಗಿ, ರಾಘು ಹಾಗೂ ಸೋಮ ಎಂಬ ಮೂವರು ಮಕ್ಕಳ ಜತೆಗೆ ಗಂಡ ದೇಜಪ್ಪ ಸೆಟ್ಟರ ಜತೆಗೆ ವಾಸಿಸುತ್ತಿರುತ್ತಾಳೆ. ಗಂಡ ಸತ್ತ ನಂತರ ಬಾಳಪ್ಪ ಸೆಟ್ಟರು ಅವಳನ್ನು ತವರುಮನೆಗೆ ಕರೆತಂದಿರುತ್ತಾರೆ. ಆದರೆ ಅವಳಿಗೆ ದೊಡ್ಡ ಮಗ ಸಿದ್ಧಣ್ಣನ ಜತೆ ಸಲಿಗೆಯಾಗಲಿ, ವ್ಯಾಮೋಹವಾಗಲಿ ಇಲ್ಲದ ಕಾರಣ ಬಾಳಪ್ಪ ಸೆಟ್ಟರ ಮರಣದ ನಂತರ ಅವಳೂ ಉಸಿರು ಬಿಗಿಹಿಡಿದೇ ಬಾಳಬೇಕಾಗುತ್ತದೆ. ಗುಬ್ಬಕ್ಕೆ ಹೇಗೂ ದಾಸಿಯಂತಾಗಿರುತ್ತಾಳೆ. ಸಾಂತೂರಿನ ಆಸ್ತಿಗೆ ಸಿದ್ಧಣ್ಣನ ತಮ್ಮ ರಾಘು ಹಕ್ಕುದಾರ ಎಂದಿತ್ತಾದರೂ ಸಿದ್ಧಣ್ಣ ತನ್ನ ಚಾಣಾಕ್ಷತನ ಮತ್ತು ಪಾಳೆಯಗಾರಿಕೆಯಿಂದ ಅಲ್ಲಿನ ಒಕ್ಕಲುಗಳನ್ನು ಎತ್ತಿಕಟ್ಟಿ ಅಲ್ಲಿನ ಗೇಣಿಯನ್ನೂ ತನ್ನ ಭಂಡಾರಕ್ಕೇ ಸಾಗಿಸತೊಡಗುತ್ತಾನೆ. ಇದು ಬ್ರಿಟಿಷರ ಒಡೆದು ಆಳುವ ರೀತಿಗೆ ಉದಾಹರಣೆಯಂತಿರುವ ಸಾಂಕೇತಿಕ ಪ್ರಸಂಗವಾಗಿದೆ.

ಸಿದ್ಧಣ್ಣನ ಸಂಸಾರದ ಕಥೆ ಮೇಲಿನಂತಾದರೆ ಕಾದಂಬರಿಕಾರರು ಅವನ ದೌಷ್ಟ್ಯಕ್ಕೆ ಎದುರಾಗಿ ಚಿತ್ರಿಸುವ ಸಾತ್ವಿಕ ಸಂಸಾರವು ಬಡ ಒಕ್ಕಲಿನವನಾದ (tenant) ರಾಮಪ್ಪ ಮೊಯಿಲಿಯದ್ದು. ಕಾರ್ಕಳ ಸಮೀಪದ ಮಿಯಾರಿನವನಾದ ರಾಮಪ್ಪ ಮೊಯಿಲಿ ತನ್ನ ಪತ್ನಿ ಎಂಕಮ್ಮಳನ್ನು ಕರೆದುಕೊಂಡು ಬದುಕಿಗೆ ಆಸರೆ ಹುಡುಕುತ್ತಾ ಪಾದಯಾತ್ರೆ ಮಾಡುತ್ತಾ ಸುತ್ತಿಸುತ್ತಿ ಬಸವಳಿದು ಮೂಡುಬಿದ್ರಿಗೆ ಬಂದು ದಾರಿತೋಚದೆ ಕುಳಿತಿರುತ್ತಾನೆ. ಅಲ್ಲಿ ಅವರಿಗೆ ಬಾಳಪ್ಪ ಸೆಟ್ಟಿಯವರ ನಂಬಿಕೆಯ ಬಂಟ ಮೊಯ್ದಿನಿ ಸಿಕ್ಕಿ, ವೇಣೂರಿಗೆ ಕರೆದುಕೊಂಡುಹೋಗಿ ತನ್ನ ಧಣಿಗಳ ಗದ್ದೆಗಳನ್ನು ಕೊಡಿಸಿ, ಅವರ ಒಕ್ಕಲಾಗಿ ನೆಲೆಗೊಳಿಸುತ್ತಾನೆ. ರಾಮಪ್ಪ ಎಂಕಮ್ಮರಿಗೆ ಒಂದು ಹೆಣ್ಣು ಮತ್ತು ಒಂದು ಗಂಡು ಮಕ್ಕಳಾಗುತ್ತವೆ. ಅವರ ಮಗ ಅನಂತ ಬಡತನದ ನಡುವೆಯೂ ಕಲಿಕೆಯಲ್ಲಿ ಮುಂದಾಗಿ, ಸ್ಕಾಲರ್‌ಶಿಪ್ ಪಡೆದು ಶಿಕ್ಷಕ ತರಬೇತಿ ಪಡೆಯುತ್ತಾನೆ. ಕಾರ್ಕಳ ಬೋರ್ಡು ಶಾಲೆಯಲ್ಲಿ ಅಧ್ಯಾಪಕನಾಗಿ ಉದ್ಯೋಗಸ್ಥನಾಗುತ್ತಾನೆ.

ಬಾಲ್ಯದಲ್ಲಿಯೆ ಅನಂತನಿಗೆ ಸಹಪಾಠಿಯಾಗಿದ್ದ ಸಿದ್ಧಣ್ಣನ ವೈರ ಪ್ರಾಪ್ತಿಸಿತ್ತು. ಧಾಂಡಿಗನಾದ ಸಿದ್ಧಣ್ಣನ ಹೊಡೆತಗಳನ್ನು ಸಹಿಸದೆ ಅನಂತ ಮತ್ತು ಕೆಲವು ಹುಡುಗರು ಸಂಘಟಿತರಾಗಿ ಒಮ್ಮೆ ಸಿದ್ಧಣ್ಣನಿಗೆ ಚೆನ್ನಾಗಿ ಬಡಿದು ನೆಲಕ್ಕೆ ಕೆಡವಿ ಗುದ್ದಿ, ಒದ್ದು ಬುದ್ಧಿಕಲಿಸಿರುತ್ತಾರೆ. ಆಗ ಹುಟ್ಟಿದ ದ್ವೇಷವನ್ನು ಮರೆಯದ ಸಿದ್ಧಣ್ಣ ಅವನ